# ಅಧ್ಯಾಯ–I
# ಸಾಮಾನ್ಯ

## 1.1 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

ಕರ್ನಾಟಕ ಸರ್ಕಾರವು 2018–19 ಸಾಲಿನಲ್ಲಿ ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ/ವರಮಾನ, ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ವಿಭಜನೀಯ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**

**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1. | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ | | | | | |
| | • ತೆರಿಗೆ ರಾಜಸ್ವ/ವರಮಾನ | 70,180.21 | 75,550.18 | 82,956.13 | 87,130.38 | **96,829.71** |
| | • ತೆರಿಗೆಯೇತರ ರಾಜಸ್ವ/ವರಮಾನ | 4,688.24 | 5,355.04 | 5,794.53 | 6,476.53 | **6,772.87** |
| | ಒಟ್ಟು | **74,868.45** | **80,905.22** | **88,750.66** | **93,606.91** | **1,03,602.58** |
| 2. | ಭಾರತ ಸರ್ಕಾರದಿಂದ ಸ್ವೀಕೃತಿಗಳು | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು[1] | 14,654.25 | 23,983.34 | 28,759.94 | 31,751.96 | 35,894.83 |
| | • ಸಹಾಯಾನುಧಾನ | 14,619.45 | 13,928.75 | 15,703.19 | 21,640.78 | 25,481.25 |
| | ಒಟ್ಟು | **29,273.70** | **37,912.09** | **44,463.13** | **53,392.74** | **61,376.08** |
| 3. | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು (1 ಮತ್ತು 2) | **1,04,142.15** | **1,18,817.31** | **1,33,213.79** | **1,46,999.65** | **1,64,978.66** |
| 4. | ಒಟ್ಟಾರೆ ವರಮಾನ ಸ್ವೀಕೃತಿಗಳಿಗೆ ಹೋಲಿಸಿದಲ್ಲಿ ರಾಜ್ಯ ಸರ್ಕಾರವು ಸಂಗ್ರಹಿಸಿದ ಒಟ್ಟಾರೆ ಶೇಕಡವಾರು ವರಮಾನ (3ಕ್ಕೆ ಹೋಲಿಸಿದಲ್ಲಿ 1ರ ಶೇಕಡಾವಾರು) | **72** | **68** | **67** | **64** | **63** |

2018–19 ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವವು/ವರಮಾನವು (₹ 1,03,602.58 ಕೋಟಿ) ಒಟ್ಟು ರಾಜಸ್ವ/ವರಮಾನ ಸ್ವೀಕೃತಿಗಳ ಶೇಕಡಾ 63ರಷ್ಟು ಆಗಿದ್ದಿತು ಎಂಬುದನ್ನು ಮೇಲಿನ ಕೋಷ್ಟಕವು ಸೂಚಿಸುತ್ತದೆ. 2018–19 ಸಾಲಿನಲ್ಲಿನ ಉಳಿದ ಶೇಕಡಾ 37ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಬಂದಿರುವುದು.

[1] 'ಎ ತೆರಿಗೆ ರಾಜಸ್ವ' ಅಡಿಯಲ್ಲಿದ್ದ ಲೆಕ್ಕಪತ್ರಗಳ ಪ್ರಧಾನ ಲೆಕ್ಕ ಶೀರ್ಷಿಕೆಗಳು 0005–ಕೇಂದ್ರ ಸರಕು ಮತ್ತು **ಸೇವಾ** ತೆರಿಗೆ, 0008–ಸಂಯೋಜಿತ ಸರಕು ಮತ್ತು **ಸೇವಾ** ತೆರಿಗೆ, 0020–ಸಂಸ್ಥೀಯ ತೆರಿಗೆ, 0021–ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0028–ಆದಾಯ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು–ಅಪ್ರಧಾನ ಲೆಕ್ಕ ಶೀರ್ಷಿಕ–901, 0032–ಆಸ್ತಿ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ ಹಾಗೂ 0045–ಸಾಮಗ್ರಿಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು–ಅಪ್ರಧಾನ ಲೆಕ್ಕ ಶೀರ್ಷಿಕೆ–901, ಇವುಗಳನ್ನು 2018–19ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳನ್ನು ರಾಜ್ಯ ಸರ್ಕಾರ ಗಳಿಸಿದ ತೆರಿಗೆಗಳಿಂದ ಪ್ರತ್ಯೇಕಿಸಿ ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲಿನಲ್ಲಿ ಸೇರಿಸಲಾಗಿದೆ.

**1.1.2** 2014–15ರಿಂದ 2018–19ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.2**
**ತೆರಿಗೆ ವರಮಾನದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 2014–15 | | 2015–16 | | 2016–17 | | 2017–18 | | 2018–19 | | 2017–18 ಕ್ಕೆ ಹೋಲಿಸಿದಲ್ಲಿ 2018–19 ರಲ್ಲಿನ ಶೇಕಡಾವಾರು ಹೆಚ್ಚಳ (+)/ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು / ಪರಿಷ್ಕೃತ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾ ಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದ ವುಗಳ ಮೇಲಿನ ತೆರಿಗೆಗಳು | 37,250.00 | 38,286.03 | 41,329.00 | 40,448.63 | 46,504.10 | 46,105.17 | 24,485.68* | 25,093.16 | 13,532.05 | 14003.06 | (-) 44.73 | (-) 44.20 |
| 2. | ರಾಜ್ಯ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ (ಎಸ್‌ಜಿಎಸ್‌ಟಿ) | --- | --- | --- | --- | --- | --- | 24,087.53* | 24,182.18 | 41,649.95 | 41,956.03[2] | 72.91 | 73.50 |
| 3. | ರಾಜ್ಯ ಅಬಕಾರಿ | 14,430.00 | 13,801.08 | 15,200.00 | 15,332.88 | 16,510.00 | 16,483.75 | 18,050.00 | 17,948.51 | 19,750.00 | 19,943.93 | 9.42 | 11.12 |
| 4. | ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | 7,450.00 | 7,025.85 | 8,200.00 | 8,214.71 | 9,100.00 | 7,805.98 | 9,000.00 | 9,023.68 | 10,400.00 | 10,774.69 | 15.55 | 19.40 |
| 5. | ವಾಹನಗಳ ಮೇಲಿನ ತೆರಿಗೆಗಳು | 4,350.00 | 4,541.57 | 4,800.00 | 5,001.69 | 5,160.00 | 5,594.39 | 6,006.00 | 6,208.57 | 6,656.42 | 6,567.67 | 10.83 | 5.78 |
| 6. | ಇತರವುಗಳು | 6,389.75 | 6,525.68 | 6,916.39 | 6,552.27 | 6,590.34 | 6,966.84 | 4,300.55 | 4,674.28 | 3,832.37 | 3,584.33 | (-) 10.89 | (-) 23.32 |
| **ಒಟ್ಟು** | | **69,869.75** | **70,180.21** | **76,445.39** | **75,550.18** | **83,864.44** | **82,956.13** | **85929.76** | **87,130.38** | **95,820.79** | **96,829.71** | **11.51** | **11.13** |

* ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯನ್ನು ವರ್ಷದ ಮಧ್ಯ ಭಾಗದಲ್ಲಿ ಅಂದರೆ 1 ಜುಲೈ 2017ರಿಂದ ತೆಗೆದುಹಾಕಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೆ ತಂದಿದ್ದರಿಂದ, ಈ ಎರಡು ಪ್ರಕರಣಗಳಲ್ಲಿ, ಪರಿಷ್ಕೃತ ಅಂದಾಜುಗಳನ್ನು ಪರಿಗಣಿಸಲಾಗಿರುವುದು.

ಮೌಲ್ಯ ವರ್ಧಿತ ತೆರಿಗೆ ಸಂಗ್ರಹಣೆಯ ಅಂದಾಜು ಹಾಗೂ ಅದರ ವಾಸ್ತವಿಕ ಸಂಗ್ರಹಣೆಯಲ್ಲಿನ ಇಳಿಕೆಗೆ ಕಾರಣವೆಂದರೆ 2017–18ರಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಜಾರಿಗೆ ತಂದಿದ್ದು ಹಾಗೂ ಮೌಲ್ಯ ವರ್ಧಿತ ತೆರಿಗೆ ಸಂಗ್ರಹಣೆಯನ್ನು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಅಡಿಯಲ್ಲಿ ತರದಿದ್ದಂತಹ ಸರಕುಗಳಿಗೆ ಹಾಗೂ ಈ ಹಿಂದಿನ ಅವಧಿಯ ಬಾಕಿಗಳಿಗೆ ಮಾತ್ರ ಸೀಮಿತಗೊಳಿಸಿದ್ದು. ರಾಜ್ಯ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಸಂಗ್ರಹಣೆಯ ಅಂದಾಜು ಹಾಗೂ ಅದರ ವಾಸ್ತವಿಕ ಸಂಗ್ರಹಣೆಯಲ್ಲಿನ ಅಸಮನಾದ/ಪರಸ್ಪರ ಹೊಂದಾಣಿಕೆ ಇರದ ಹೆಚ್ಚಳಕ್ಕೆ ಕಾರಣವೆಂದರೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು 2017–18ರಲ್ಲಿ ಕೇವಲ ಆರು ತಿಂಗಳುಗಳಿಗೆ ಹಾಗೂ 2018–19 ಸಾಲಿನಲ್ಲಿ ಸಂಪೂರ್ಣ ಸಾಲಿನಲ್ಲಿ ಜಾರಿಯಲ್ಲಿ ಇದ್ದುದು. **"ಇತರವುಗಳ"** (ಕ್ರಮ ಸಂಖ್ಯೆ 6) ಅಡಿಯಲ್ಲಿನ ವರಮಾನದ ಅಂದಾಜು ಮತ್ತು ವಾಸ್ತವಿಕ ಸಂಗ್ರಹಣೆಯಲ್ಲಿ ಇಳಿಮುಖಗೊಳ್ಳಲು ಕಾರಣವೆಂದರೆ ಶೀರ್ಷಿಕೆಗಳು 0042 (ಸರಕುಗಳು ಮತ್ತು

[2] ಬಡ್ಡಿ (₹ 53.84 ಕೋಟಿ), ದಂಡ (₹ 21.45 ಕೋಟಿ), ಶುಲ್ಕ (₹ 137.55 ಕೋಟಿ), ಖರೀದಿಗಳ ಮೇಲಿನ ತೆರಿಗೆ ಜಮೆ ರಾಜ್ಯ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಮತ್ತು ಸಮಗ್ರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯ ಅಡ್ಡ–ಬಳಕೆ (₹ 12,246.82 ಕೋಟಿ), ತೆರಿಗೆ ಭಾಗದಲ್ಲಿನ ಸಮಗ್ರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಒಳ–ವರ್ಗಾವಣೆಯನ್ನು ರಾಜ್ಯ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಹಂಚಿಕೆ ಮಾಡಿರುವುದು (₹ 1,669.65 ಕೋಟಿ) ಸಮಗ್ರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯಿಂದ ಮುಂಗಡ ಹಂಚಿಕೆ (₹ 5,559.04 ಕೋಟಿ), ಇವುಗಳನ್ನು ಒಳಗೊಂಡಿರುತ್ತದೆ.

ಪ್ರಯಾಣಕರುಗಳ ಮೇಲಿನ ತೆರಿಗೆಗಳು) ಮತ್ತು 0045 (ಸರಕುಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು) ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯಲ್ಲಿ ಅಂತರ್ಗತಗೊಂಡಿದ್ದು.

**1.1.3** 2014–15ರಿಂದ 2018–19ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.3**

**ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 2014–15 | | 2015–16 | | 2016–17 | | 2017–18 | | 2018–19 | | 2017–18 ಕ್ಕೆ ಹೋಲಿಸಿದಲ್ಲಿ 2018–19ರಲ್ಲಿನ ಶೇಕಡಾವಾರು ಹೆಚ್ಚಳ (+) / ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಕಬ್ಬಿಣೇತರ ಖನಿಜ ಮತ್ತು ಲೋಹ ಉದ್ಯಮಗಳು | 1,750.00 | 1,931.10 | 2,048.15 | 2,003.80 | 2,402.83 | 2,419.43 | 2,667.65 | 2,746.80 | 3,000.00 | 3,026.58 | 12.46 | 10.18 |
| 2. | ಇತರೆ ತೆರಿಗೆಯೇತರ ಸ್ವೀಕೃತಿಗಳು | 2,723.43 | 2,757.14 | 3,158.02 | 3,351.24 | 3,817.62 | 3,375.10 | 4,276.97 | 3,729.73 | 5,180.94 | 3,746.29 | 21.13 | 0.44 |
| **ಒಟ್ಟು** | | **4,473.43** | **4,688.24** | **5,206.17** | **5,355.04** | **6,220.45** | **5,794.53** | **6,944.62** | **6,476.53** | **8,180.94** | **6,772.87** | **17.80** | **4.57** |

## 1.2 ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ

ರಾಜಸ್ವ/ವರಮಾನದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2019ರಲ್ಲಿದ್ದಂತೆ ರಾಜಸ್ವ/ವರಮಾನ ಬಾಕಿಗಳು **ಕೋಷ್ಟಕ – 1.2**ರಲ್ಲಿ ವಿವರಿಸಿರುವಂತೆ ₹ 23,015.11 ಕೋಟಿಯಷ್ಟಿದ್ದವು.

**ಕೋಷ್ಟಕ 1.2**

**ರಾಜಸ್ವ/ವರಮಾನ ಬಾಕಿಗಳು** **(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 31 ಮಾರ್ಚ್ 2019ರಲ್ಲಿದ್ದಂತೆ ಬಾಕಿಯಿರುವ ಒಟ್ಟು ಮೊತ್ತ | ಇಲಾಖೆಯ ಉತ್ತರಗಳು |
|---|---|---|---|
| 1. | 0039 (ರಾಜ್ಯ ಅಬಕಾರಿ) | 763.62 | ಒಟ್ಟಾರೆ ಬಾಕಿಗಳ ಪೈಕಿ, ₹ 82.83 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಾಜ್ಞೆಯ ಅಡಿಯಲ್ಲಿ ಹಾಗೂ ₹ 350.15 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣಪತ್ರಗಳಿಂದ ವ್ಯಾಪಿಸಿರುತ್ತದೆ.ಉಳಿದ ₹ 330.64 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿ ಪ್ರಕ್ರಿಯೆಗಳು ವಿವಿಧ ಹಂತಗಳಲ್ಲಿದ್ದವು. |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು) | 19,554.34 | ಒಟ್ಟಾರೆ ಬಾಕಿಗಳ ಪೈಕಿ, ₹ 3,025.80 ಕೋಟಿ ಮೊತ್ತಕ್ಕೆ ನ್ಯಾಯಾಲಯಗಳಿಂದ ತಡೆಯಾಜ್ಞೆ ಇರುತ್ತದೆ, ₹ 659.61 ಕೋಟಿ ಮೊತ್ತವು ಬಿಐಎಫ್ಆರ್[3] ಮುಂದಿದೆ, ₹ 571.62 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿವೆ, ₹ 164.50 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣ ಪತ್ರಗಳಿಂದ ವ್ಯಾಪಿಸಿವೆ, ₹ 14,849.42 ಕೋಟಿ ಮೊತ್ತವು ನ್ಯಾಯಾಲಯಗಳ ಹಾಗೂ ಇಲಾಖಾ ವಸೂಲಾತಿಯ ವ್ಯಾಪ್ತಿಯಲ್ಲಿವೆ ಹಾಗೂ ₹ 180.67 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಸಾಧ್ಯವಿಲ್ಲದೆಯೇ ದಾಖಲೆಗಳಿಂದ ತೆಗೆದುಹಾಕುವ (ರೈಟ್ ಆಫ್) ಪ್ರಸ್ತಾವನೆಯನ್ನು ಮಾಡಲಾಗಿದೆ ಹಾಗೂ ಸ್ವೀಕರಿಸಲಾಗಿರುವ ₹ 102.72 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿರುತ್ತದೆ. |
| 3. | 0853 (ಕಬ್ಬಿಣೇತರ ಖನಿಜ ಮತ್ತು ಲೋಹ ಉದ್ಯಮಗಳು) | 2,370.81 | ಇಲಾಖೆಯು ಮಾಹಿತಿಯನ್ನು ಒದಗಿಸಿರುವುದಿಲ್ಲ. |
| 4. | 0030 (ಮುದ್ರಾಂಕ ಮತ್ತು ನೋಂದಣಿ) | 162.38 | ಇಲಾಖೆಯು ಮಾಹಿತಿಯನ್ನು ಒದಗಿಸಿರುವುದಿಲ್ಲ. |
| 5. | ವಿದ್ಯುತ್/ಇಂಧನ | 163.96 | ಇಲಾಖೆಯು ಮಾಹಿತಿಯನ್ನು ಒದಗಿಸಿರುವುದಿಲ್ಲ. |
| **ಒಟ್ಟು** | | **23,015.11** | |

[3] ಕೈಗಾರಿಕಾ ಮತ್ತು ಹಣಕಾಸು ಪುನರ್–ನಿರ್ಮಾಣಕ್ಕಾಗಿನ ಮಂಡಳಿ.

ಸಾರಿಗೆ ಮತ್ತು ಕಂದಾಯ ಇಲಾಖೆಗಳಿಗೆ ಸಂಬಂಧಿಸಿದಂತೆ ರಾಜಸ್ವ/ವರಮಾನದ ಬಾಕಿಗಳು, ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಕೋರಲಾಗಿದೆಯಾದರೂ (ಆಗಸ್ಟ್ 2019), ಅವುಗಳ ಮಾಹಿತಿಯನ್ನು ಸ್ವೀಕರಿಸಲಾಗಿರುವುದಿಲ್ಲ (ಸೆಪ್ಟಂಬರ್ 2020).

## 1.3 ಇಲಾಖೆಗಳು ಪತ್ತೆಹಚ್ಚಿರುವಂತಹ ತೆರಿಗೆ ವಂಚನೆ ಪ್ರಕರಣಗಳು

ರಾಜ್ಯ ಅಬಕಾರಿ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆ, ಮುದ್ರಾಂಕಗಳು ಮತ್ತು ನೋಂದಣಿ ಮತ್ತು ಸಾರಿಗೆ ಇಲಾಖೆಗಳು ಪತ್ತೆಹಚ್ಚಿರುವಂತಹ ತೆರಿಗೆ ವಂಚನೆಯ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.3** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3**
**ತೆರಿಗೆ ವಂಚನೆಯ ಪ್ರಕರಣಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 31 ಮಾರ್ಚ್ 2018ರಲ್ಲಿದ್ದಂತೆ ಬಾಕಿ ಇದ್ದ ಪ್ರಕರಣ ಗಳು | 2018-19 ರಲ್ಲಿ ಪತ್ತೆಹಚ್ಚಲಾದ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ತನಿಖೆಗಳನ್ನು ಪೂರ್ಣಗೊಳಿಸಲಾಗಿರುವಂತಹ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದಂತಹ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2019ರಲ್ಲಿದ್ದಂತೆ ಅಂತಿಮಗೊಳಿಸಲು ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ಪಾವತಿಗಾಗಿ ತಗಾದೆಯ ಮೊತ್ತ | |
| 1. | 0039 (ರಾಜ್ಯ ಅಬಕಾರಿ) | 02 | 01 | 03 | 00 | 00 | 03 |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆ) | 3,923 | 10,885 | 14,808 | 9,130 | 6,252 | 5,678 |
| 3. | 0030 (ಮುದ್ರಾಂಕ ಮತ್ತು ನೋಂದಣಿ) | 04 | 06 | 10 | 00 | 00 | 10 |
| 4. | 0041 (ಮೋಟಾರು ವಾಹನಗಳ ಮೇಲಿನ ತೆರಿಗೆ) | 06 | 00 | 06 | 00 | 00 | 06 |

ರಾಜ್ಯದ ವರಮಾನದ ಹಿತದೃಷ್ಟಿಯಿಂದ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ತ್ವರಿತ ಕ್ರಮವನ್ನು ತೆಗೆದುಕೊಳ್ಳಬೇಕು. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಪತ್ತೆಹಚ್ಚಲಾದಂತಹ ಪ್ರಕರಣಗಳ ಪೈಕಿ ಬಹಳಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆಯಾದರೂ ವರ್ಷದ ಅಂತ್ಯದಲ್ಲಿದ್ದಂತೆ ಅನೇಕ ಪ್ರಕರಣಗಳು ಇನ್ನೂ ಬಾಕಿಯಿದ್ದವು. ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ, ರಾಜ್ಯ ಅಬಕಾರಿ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ, ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 2018-19 ಸಾಲಿನಲ್ಲಿ ಯಾವುದೇ ವಿಲೇವಾರಿ/ಇತ್ಯರ್ಥಗಳು ಆಗಿರುವುದಿಲ್ಲ. ಅಂತಹ ಯಾವುದೇ ಪ್ರಕರಣಗಳು ಬಾಕಿಯಿರುವುದಿಲ್ಲ ಹಾಗೂ 2018-19ರಲ್ಲಿ ಯಾವುದೇ ಹೊಸ ಪ್ರಕರಣಗಳನ್ನು ಪತ್ತೆಹಚ್ಚಿರುವುದಿಲ್ಲ ಎಂಬುದಾಗಿ ಗಣಿಗಳು ಮತ್ತು ಭೂವಿಜ್ಞಾನ ಹಾಗೂ ಇಂಧನ ಇಲಾಖೆಗಳು ತಿಳಿಸಿದವು.

ವಂಚನೆಗಳು ಹಾಗೂ ತೆರಿಗೆ/ಶುಲ್ಕ ಪಾವತಿಗೆ ಸಂಬಂಧಿಸಿದಂತೆ ವಂಚಿಸಿರುವ ಪ್ರಕರಣಗಳ ವಿವರಗಳನ್ನು ಒದಗಿಸುವಂತೆ ಭೂ ಕಂದಾಯ ಇಲಾಖೆಯನ್ನು ಕೋರಲಾಯಿತಾದರೂ (ಆಗಸ್ಟ್ 2019) ಈ ಬಗ್ಗೆ ಮಾಹಿತಿಯು ಸ್ವೀಕೃತವಾಗಿರುವುದಿಲ್ಲ (ಸೆಪ್ಟಂಬರ್ 2020).

## 1.4 ಬಾಕಿಯಿರುವ ಮರುಪಾವತಿ ಪ್ರಕರಣಗಳು

ವಾಣಿಜ್ಯ ತೆರಿಗೆಗಳ ಇಲಾಖೆ ಹಾಗೂ ರಾಜ್ಯ ಅಬಕಾರಿ ಇಲಾಖೆ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳು ವರದಿ ಮಾಡಿರುವಂತೆ, ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಮರುಪಾವತಿಗಾಗಿನ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ನೀಡಲಾದ ಮರುಪಾವತಿಗಳು ಹಾಗೂ 2018-19 ಸಾಲಿನ ಅಂತ್ಯದಲ್ಲಿದ್ದಂತೆ ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆಯನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4**

**ಬಾಕಿಯಿರುವ ಮರುಪಾವತಿ ಪ್ರಕರಣಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | ಮಾರಾಟಗಳ ಮೇಲಿನ ತೆರಿಗೆ/ಮೌಲ್ಯವರ್ಧಿತ ತೆರಿಗೆ | | ರಾಜ್ಯ ಅಬಕಾರಿ | | ಮುದ್ರಾಂಕಗಳು ಮತ್ತು ನೋಂದಣಿ | |
|---|---|---|---|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 1. | ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದಂತಹ ಮರುಪಾವತಿಗಾಗಿನ ಕೋರಿಕೆಗಳು | 1,918 | 313.81 | 00 | 00 | 1,388 | 3.50 |
| 2. | ಮರುಪಾವತಿಗಾಗಿ ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಕೋರಿಕೆಗಳು | 9,690 | 6,802.41 | ಮಾಹಿತಿಯನ್ನು ಒದಗಿಸಿರುವುದಿಲ್ಲ | 11.22 | 1,903 | 11.65 |
| 3. | ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು | 9,292 | 6,682.51 | ಮಾಹಿತಿಯನ್ನು ಒದಗಿಸಿರುವುದಿಲ | 11.22 | 1,367 | 9.07 |
| 4. | ವರ್ಷದ ಅಂತ್ಯದಲ್ಲಿ ಬಾಕಿಯಿರುವ ಮರುಪಾವತಿ ಪ್ರಕರಣಗಳು | 2,316 | 433.70 | 00 | 00 | 1,924 | 6.08 |

ಮರುಪಾವತಿಗಾಗಿ ಯಾವುದೇ ಕೋರಿಕೆಗಳು ಬಾಕಿಯಿರಲಿಲ್ಲ ಹಾಗೂ 2018–19 ಸಾಲಿನಲ್ಲಿಯೂ ಸಹ ಮರುಪಾವತಿಗಾಗಿ ಯಾವುದೇ ಕೋರಿಕೆಗಳು ಇರಲಿಲ್ಲ ಎಂಬುದಾಗಿ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಇಂಧನ ಇಲಾಖೆಗಳು ತಿಳಿಸಿದವು.

ಮರುಪಾವತಿಗಾಗಿ ಕೋರಿಕೆಗಳಿಗೆ ಸಂಬಂಧಿಸಿದಂತೆ ಬಾಕಿಯಿರುವ ಪ್ರಕರಣಗಳು, ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವಂತೆ ಸಾರಿಗೆ ಮತ್ತು ಕಂದಾಯ ಇಲಾಖೆಗಳನ್ನು ಕೋರಲಾಯಿತಾದರೂ (ಆಗಸ್ಟ್ 2019) ಈ ಬಗ್ಗೆ ಮಾಹಿತಿಯು ಸ್ವೀಕೃತವಾಗಿರುವುದಿಲ್ಲ (ಸೆಪ್ಟಂಬರ್ 2020).

## 1.5 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ–ಪರಿಶೀಲನೆ ಮಾಡುವುದಕ್ಕಾಗಿ ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸಾರ ಪ್ರಮುಖವಾದಂತಹ ಲೆಕ್ಕಪತ್ರಗಳು ಹಾಗೂ ಇನ್ನಿತರೆ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆಹಚ್ಚಲಾದಂತಹ ಆದರೆ, ಸ್ಥಳದಲ್ಲಿಯೇ ಇತ್ಯರ್ಥಗೊಳಿಸಲು ಸಾಧ್ಯವಾಗದಂತಹ ನಿಯಮಬಾಹಿರತೆಗಳಿಗೆ ಸಂಬಂಧಿತ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರೀಕ್ಷಣೆ ಮಾಡಲಾದಂತಹ ಕಚೇರಿಯ ಮುಖ್ಯಸ್ಥರಿಗೆ ಪರೀಕ್ಷಣಾ ವರದಿಗಳನ್ನು ನೀಡುವ ಮೂಲಕ ಹಾಗೂ ತ್ವರಿತ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ, ಅದರ ಪ್ರತಿಗಳನ್ನು ಉನ್ನತ ಅಧಿಕಾರಿಗಳಿಗೆ ಕಳುಹಿಸಿಕೊಡುವ ಮೂಲಕ ಈ ಪರೀಕ್ಷಣೆಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಕಚೇರಿಗಳ ಮುಖ್ಯಸ್ಥರುಗಳು/ಸರ್ಕಾರ ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಅಂಶಗಳಿಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವ, ತಪ್ಪುಗಳು ಹಾಗೂ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಮಹಾಲೇಖಾಪಾಲರಿಗೆ ಪ್ರಾರಂಭಿಕ/ಮೂಲ ಉತ್ತರವನ್ನು ನೀಡುವ ಮೂಲಕ ಅನುಪಾಲನಾ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವ ಅಗತ್ಯತೆಯಿರುತ್ತದೆ. ಹಣಕಾಸಿಗೆ ಸಂಬಂಧಿಸಿದಂತೆ ಗಮನಿಸಲಾದಂತಹ ಗುರುತರವಾದ ನಿಯಮಬಾಹಿರತೆಗಳನ್ನು ಇಲಾಖೆಗಳ ಮುಖ್ಯಸ್ಥರುಗಳಿಗೆ ಹಾಗೂ ಸರ್ಕಾರಕ್ಕೆ ವರದಿ ಮಾಡಲಾಗುವುದು.

1,359 ಪರೀಕ್ಷಣಾ ವರದಿಗಳಲ್ಲಿ (ಡಿಸೆಂಬರ್ 2018ರವರೆಗೆ ನೀಡಲಾದಂತಹ) ₹ 1,822.98 ಕೋಟಿ ಮೊತ್ತವು ಒಳಗೊಂಡಂತೆ 3,802 ಕಂಡಿಕೆಗಳು ಜೂನ್ 2019ರ ಅಂತ್ಯದಲ್ಲಿದ್ದಂತೆ ಬಾಕಿ ಉಳಿದಿದ್ದವು. ವಿವರಗಳನ್ನು ಹಿಂದಿನ ಎರಡು ವರ್ಷಗಳ ಅನುಗುಣವಾದಂತಹ ಅಂಕಿಸಂಖ್ಯೆಗಳ ಜೊತೆಯಲ್ಲಿ **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5**
**ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2017ರಲ್ಲಿದ್ದಂತೆ | ಜೂನ್ 2018ರಲ್ಲಿದ್ದಂತೆ | ಜೂನ್ 2019ರಲ್ಲಿದ್ದಂತೆ |
|---|---|---|---|
| ಇತ್ಯರ್ಥಗೊಳ್ಳಲು ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | 2,282 | 1,385 | 1359 |
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವ ಅಂಶಗಳ ಸಂಖ್ಯೆ | 5,527 | 4,099 | 3,802 |
| ಒಳಗೊಂಡಿರುವಂತಹ ರಾಜಸ್ವ/ವರಮಾನದ ಮೊತ್ತ (₹ ಕೋಟಿಯಲ್ಲಿ) | 2,010.14 | 1,467.14 | 1,822.98 |

**1.5.1** 30 ಜೂನ್ 2019ರಲ್ಲಿದ್ದಂತೆ ಬಾಕಿಯಿದ್ದಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.1**
**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಗಳ ಸ್ವರೂಪ | ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರು ವಂತಹ ಅಂಶಗಳ ಸಂಖ್ಯೆ | ಒಳಗೊಂಡಿರುವಂತಹ ಹಣಕಾಸಿನ ಮೌಲ್ಯ |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 630 | 2,179 | 580.70 |
| 2. | | ರಾಜ್ಯ ಅಬಕಾರಿ | 66 | 84 | 13.61 |
| 3. | ಕಂದಾಯ | ಭೂ ಕಂದಾಯ | 36 | 68 | 7.63 |
| 4. | | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 375 | 903 | 226.86 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆ | 159 | 347 | 20.89 |
| 6. | ವಾಣಿಜ್ಯ ಮತ್ತು ಕೈಗಾರಿಕೆಗಳು | ಕಬ್ಬಿಣೇತರ ಖನಿಜಗಳ ಗಣಿಗಾರಿಕೆ ಮತ್ತು ಲೋಹ ವಿಜ್ಞಾನ ಸಂಬಂಧಿತ ಕೈಗಾರಿಕೆಗಳು | 82 | 206 | 969.34 |
| 7. | ಇಂಧನ | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ | 11 | 15 | 3.95 |
| | | **ಒಟ್ಟು** | **1,359** | **3,802** | **1,822.98** |

2018-19ರಲ್ಲಿ ನೀಡಲಾಗಿದ್ದಂತಹ 303 ಪರೀಕ್ಷಣಾ ವರದಿಗಳ ಪೈಕಿ 192 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಒಳಗಾದಂತಹ ಕಚೇರಿಗಳ ಮುಖ್ಯಸ್ಥರುಗಳಿಂದ ಲೆಕ್ಕಪರಿಶೋಧನೆಯು ಮೊದಲ/ಮೂಲ ಉತ್ತರವನ್ನೂ ಸಹ ಸ್ವೀಕರಿಸಿರುವುದಿಲ್ಲ (ಅಂತಹ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಸ್ವೀಕರಿಸಲು ಅಗತ್ಯವಿದ್ದಿತಾದರೂ). ಉತ್ತರಗಳು ಸ್ವೀಕೃತಗೊಳ್ಳದಿದ್ದ ಕಾರಣದಿಂದಾಗಿ ಬಾಕಿ ಉಳಿದಿದ್ದಂತಹ ಪರೀಕ್ಷಣಾ ವರದಿಗಳ ಬಹಳಷ್ಟು ಸಂಖ್ಯೆಯು, ಮಹಾಲೇಖಪಾಲರು ಪರೀಕ್ಷಣಾ ವರದಿಗಳಲ್ಲಿ ಸ್ಪಷ್ಟಪಡಿಸಿದ್ದಂತಹ ತಪ್ಪುಗಳು, ಲೋಪದೋಷಗಳು ಹಾಗೂ ನಿಯಮಬಾಹಿರತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕಚೇರಿಗಳ ಮತ್ತು ಇಲಾಖೆಗಳ ಮುಖ್ಯಸ್ಥರುಗಳು ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ಸಲುವಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ ಅಡ್‌ಹಾಕ್ ಸಮಿತಿಗಳನ್ನು ರಚಿಸುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಯವರ ನೇತೃತ್ವದಲ್ಲಿದ್ದು ಹಾಗೂ

ರಾಜ್ಯ ಸರ್ಕಾರದ ಪದನಿಮಿತ್ತ ಅಧಿಕಾರಿಗಳು ಹಾಗೂ ಪ್ರಧಾನ ಮಹಾಲೇಖಾಪಾಲರಿಂದ ನಾಮನಿರ್ದೇಶನವನ್ನು ಹೊಂದಿದ ಓರ್ವ ಅಧಿಕಾರಿಯವರು ಸಭೆಗೆ ಹಾಜರಾಗಬೇಕಿದ್ದಿತು. ಈ ಸಮಿತಿಗಳು ನಿಯತಕಾಲಿಕವಾಗಿ, ಯಾವುದೇ ಸಂದರ್ಭದಲ್ಲಿಯೂ, ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲವಾದರೂ ಸಭೆ ಸೇರಬೇಕಿದ್ದಿತು.

2018–19 ಸಾಲಿನಲ್ಲಿ ಯಾವುದೇ ಇಲಾಖೆಯೂ ಸಮಿತಿಯ ಸಭೆಗಳನ್ನು ನಡೆಸಿರಲಿಲ್ಲ. ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಇಲಾಖಾ ಲೆಕ್ಕಪರಿಶೋಧನಾ ಸಭೆಗಳನ್ನು ನಡೆಸುವ ಸಲುವಾಗಿ ಕ್ರಮವನ್ನು ಕೈಗೊಳ್ಳಬೇಕು.

## 1.5.3 ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ದಾಖಲೆಗಳನ್ನು ಒದಗಿಸದಿದ್ದುದು

ರಾಜಸ್ವ/ವರಮಾನದ ಸ್ಥಳೀಯ ಲೆಕ್ಕಪರಿಶೋಧನೆಯ ಕಾರ್ಯಕ್ರಮವನ್ನು ತಯಾರಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಂಬಂಧಿಸಿದ ದಾಖಲೆಗಳನ್ನು ಸಿದ್ಧವಾಗಿಡುವುದಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಸಾಕಷ್ಟು ಮುಂಚಿತವಾಗಿ ಈ ಬಗ್ಗೆ ತಿಳಿವಳಿಕೆ ಪತ್ರಗಳನ್ನು ಸಂಬಂಧಪಟ್ಟ ಕಚೇರಿ/ಇಲಾಖೆಗಳಿಗೆ ನೀಡಲಾಗುವುದು.

2018–19 ಸಾಲಿನಲ್ಲಿ, ಹಣಕಾಸು, ಕಂದಾಯ, ಸಾರಿಗೆ, ವಾಣಿಜ್ಯ ಮತ್ತು ಕೈಗಾರಿಕೆಗಳು ಹಾಗೂ ಇಂದನ ಇಲಾಖೆಗಳ ಅಡಿಯಲ್ಲಿನ 303 ಕಚೇರಿಗಳನ್ನು ಲೆಕ್ಕಪರಿಶೋಧನೆಗಾಗಿ ಕೈಗೆತ್ತಿಕೊಳ್ಳಲಾಯಿತು.

ಇವುಗಳ ಪೈಕಿ, ಹಣಕಾಸು ಹಾಗೂ ಕಂದಾಯ ಇಲಾಖೆಗಳ ಅಡಿಯಲ್ಲಿನ 10 ಕಚೇರಿಗಳಲ್ಲಿ 27 ದಾಖಲೆಗಳನ್ನು/ಕಡತಗಳನ್ನು ಲೆಕ್ಕಪರಿಶೋಧನೆಗಾಗಿ ಒದಗಿಸಲಿಲ್ಲ. ಆದ್ದರಿಂದ, ಈ ಕೆಳಗೆ ನಮೂದಿಸಿರುವಂತಹ ಆ ಪ್ರಕರಣಗಳಲ್ಲಿ ಮಾಡಲಾದಂತಹ ಕರನಿರ್ಧಾರಣೆಗಳು ಹಾಗೂ ವಿಧಿಸಲಾದಂತಹ ತೆರಿಗೆಗಳು ಅಥವಾ ಸಂಗ್ರಹಿಸಲಾದಂತಹ ತೆರಿಗೆಗಳ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

**ಕೋಷ್ಟಕ 1.5.2**
**ಲೆಕ್ಕಪರಿಶೋಧನಾ ಪರಿಶೀಲನೆಗಾಗಿ ಒದಗಿಸದಿದ್ದಂತಹ ದಾಖಲೆಗಳ ವಿವರಗಳು**

| ಕ್ರಮ ಸಂಖ್ಯೆ | ಕಚೇರಿ/ಇಲಾಖೆಯ ಹೆಸರು | | ಲೆಕ್ಕಪರಿಶೋಧನೆಗೆ ಒದಗಿಸದಿದ್ದ ದಾಖಲೆಗಳ ಸಂಖ್ಯೆ |
|---|---|---|---|
| 1. | ಹಣಕಾಸು ಇಲಾಖೆ | ವಾಣಿಜ್ಯ ತೆರಿಗೆಗಳು | 10 |
| 2. | ಕಂದಾಯ ಇಲಾಖೆ | ಮುದ್ರಾಂಕ ಮತ್ತು ನೋಂದಣಿ ಶುಲ್ಕ | 2 |
| | | ಭೂ ಕಂದಾಯ | 15 |
| | ಒಟ್ಟು | | 27 |

## 1.5.4 ಕರಡು ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿರುವಂತಹ ಕರಡು ಕಂಡಿಕೆಗಳು/ ಅನುಪಾಲನಾ ಲೆಕ್ಕಪರಿಶೋಧನಾ ವರದಿಗಳನ್ನು ಮಹಾಲೇಖಾಪಾಲರು ಸಂಬಂಧಿತ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅರೆ–ಸರ್ಕಾರಿ ಪತ್ರಗಳ ಮೂಲಕ ಕಳುಹಿಸಿಕೊಡುವರು. ಸರ್ಕಾರವು ನೀಡಿರುವ (ಏಪ್ರಿಲ್ 1952) ನಿರ್ದೇಶನಗಳಂತೆ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳ ಒಳಗೆ ಎಲ್ಲಾ ಇಲಾಖೆಗಳು ಕರಡು ಕಂಡಿಕೆಗಳು/ ಅನುಪಾಲನಾ ಲೆಕ್ಕಪರಿಶೋಧನಾ ವರದಿಗಳ ಬಗ್ಗೆ ತಮ್ಮ ಟೀಕೆಟಿಪ್ಪಣಿಗಳನ್ನು/ಉತ್ತರಗಳನ್ನು ನೀಡುವ ಅಗತ್ಯತೆಯಿರುತ್ತದೆ ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸದೇ ಇರುವಂತಹ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಅಂತಹ ಪ್ರತಿಯೊಂದು ಕಂಡಿಕೆಯ ಅಂತ್ಯದಲ್ಲಿಯೂ ತಪ್ಪದೇ ಸೂಚಿಸಲಾಗುವುದು.

31 ಮಾರ್ಚ್ 2019ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾಪಿಸಲಾಗಿದ್ದಂತಹ ಹದಿನೆಂಟು ಕರಡು ಕಂಡಿಕೆಗಳನ್ನು (ಒಂದು ಅನುಪಾಲನಾ ಲೆಕ್ಕಪರಿಶೋಧನೆಯೂ ಸೇರಿದಂತೆ) ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಹಾಗೂ ಆ

ಕರಡು ಕಂಡಿಕೆಗಳ ಪ್ರತಿಗಳನ್ನು ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳಿಗೆ ಮೇ 2019 ಮತ್ತು ಮೇ 2020ರ ನಡುವೆ ಕಳುಹಿಸಿಕೊಡಲಾಗಿದ್ದಿತು.

ವಾಣಿಜ್ಯ ತೆರಿಗೆಗಳ ಇಲಾಖೆ ಹಾಗೂ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಹಾಗೂ ಅನುಪಾಲನಾ ಲೆಕ್ಕಪರಿಶೋಧನೆಯೂ ಒಳಗೊಂಡಂತೆ 12 ಕರಡು ಕಂಡಿಕೆಗಳಿಗೆ ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸಲಾಯಿತು. ಅನುಪಾಲನಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ನಿರ್ಗಮನ ಮಟ್ಟದ ಸಭೆಯನ್ನು ಫೆಬ್ರವರಿ 2019ರಲ್ಲಿ ನಡೆಸಲಾಯಿತು.

ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದ ಉಳಿದ ಆರು ಕರಡು ಕಂಡಿಕೆಗಳಿಗೆ ಸರ್ಕಾರದಿಂದ ಉತ್ತರವು ಸ್ವೀಕೃತಗೊಂಡಿರುವುದಿಲ್ಲ (ಸೆಪ್ಟಂಬರ್ 2020).

## 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು – ಸ್ಥಿತಿಗತಿಗಳ ಒಂದು ಸಂಕ್ಷಿಪ್ತ ಸಾರಾಂಶ

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಪಿ.ಎ.ಸಿ) ನಿಯಮಗಳು ಮತ್ತು ಕಾರ್ಯವಿಧಾನದ (ಆಂತರಿಕ ಕಾರ್ಯವಿಧಾನ) ಅನುಸಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸುವ ಅಗತ್ಯತೆಯಿರುತ್ತದೆ. ಆ ರೀತಿ ಸಲ್ಲಿಸುವ ಮೊದಲು, ಅಂತಹ ಇಲಾಖಾ ಟಿಪ್ಪಣಿಗಳನ್ನು ಮಹಾಲೇಖಾಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದರ ಅಗತ್ಯತೆಯನ್ನೂ ಸಹ ಈ ನಿಯಮಗಳು ಹೊಂದಿರುತ್ತವೆ.

ಕರ್ನಾಟಕ ಸರ್ಕಾರದ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಆರು[4] ವರದಿಗಳಲ್ಲಿ 103 ಕಂಡಿಕೆಗಳನ್ನು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳೂ ಸೇರಿದಂತೆ) ಸೇರಿಸಲಾಗಿದ್ದಿತು ಹಾಗೂ ಅವುಗಳನ್ನು ರಾಜ್ಯ ಶಾಸನ ಸಭೆಯ ಮುಂದೆ ಫೆಬ್ರವರಿ 2015 ರಿಂದ ಅಕ್ಟೋಬರ್ 2019ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ಏಪ್ರಿಲ್ 2020ರಲ್ಲಿದ್ದಂತೆ, 103 ಕಂಡಿಕೆಗಳ ಪೈಕಿ, 82 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳನ್ನು ಸ್ವೀಕರಿಸಲಾಯಿತು. ಈ ಇಲಾಖಾ ಟಿಪ್ಪಣಿಗಳನ್ನು ಎಂಟರಿಂದ 16 ತಿಂಗಳುಗಳ ವಿಳಂಬದೊಂದಿಗೆ ಸ್ವೀಕರಿಸಲಾಗಿದ್ದಿತು. ಆದಾಗ್ಯೂ, ಐದು ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ, ರಾಜ್ಯ ಅಬಕಾರಿ ಮತ್ತು ಗಣಿಗಳು ಮತ್ತು ಭೂಜ್ಞಾನ) 21 ಕಂಡಿಕೆಗಳಿಗೆ ಸಂಬಂಧಿಸಿದಂತೆ ಇಲಾಖಾ ಟಿಪ್ಪಣಿಗಳು ಇನ್ನೂ ಸ್ವೀಕೃತಗೊಂಡಿರುವುದಿಲ್ಲ.

ಇದು, ವಸೂಲಾತಿಯಾಗದೇ ಉಳಿದಿರುವಂತಹ ರಾಜಸ್ವ/ವರಮಾನ ಸಂಗ್ರಹಣೆಗೆ ಸಹಾಯಕವೂ ಆಗಿರುವಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವಂತಹ ಪ್ರಮುಖ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಅನುಸರಿಸುವ ಸಲುವಾಗಿ ಕಾರ್ಯಾಂಗವು ಇನ್ನೂ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ ಎಂಬುದನ್ನು ಸೂಚಿಸುತ್ತದೆ.

---

[4]
1. 31 ಮಾರ್ಚ್ 2014ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.
2. ಮಾರ್ಚ್ 2015ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.
3. ಮಾರ್ಚ್ 2016ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.
4. ಸರ್ಕಾರಿ ಭೂಮಿಯ ಹಂಚಿಕೆ, ಗುತ್ತಿಗೆ, ಒತ್ತುವರಿಗಳ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸಿಕೆ, ಇವುಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.
5. ಮಾರ್ಚ್ 2017ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.
6. ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಅನುಸರಿಸುವ ಸಲುವಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಅನುಸರಿಸುವ ಸಲುವಾಗಿನ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ ಹತ್ತು ವರ್ಷಗಳಲ್ಲಿ ನೀಡಲಾದಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದಂತಹ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದಂತಹ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1 ಹಾಗೂ 1.6.2 ಕಂಡಿಕೆಗಳು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕಂಡುಹಿಡಿಯಲಾದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯ[5] ಕಾರ್ಯನಿರ್ವಹಣೆಯನ್ನು ಹಾಗೂ ಅಲ್ಲದೆಯೇ 2008–09ರಿಂದ 2017–18 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಪ್ರಕರಣಗಳನ್ನು ಚರ್ಚಿಸುತ್ತವೆ.

### 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದಂತಹ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ 31 ಮಾರ್ಚ್ 2019ರಲ್ಲಿದ್ದಂತೆ ಅವುಗಳ ಸ್ಥಿತಿಗತಿಗಳ ಒಂದು ಸಂಕ್ಷಿಪ್ತ ಚಿತ್ರಣವನ್ನು ಈ ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿಯ ರೂಪದಲ್ಲಿ ನೀಡಲಾಗಿದೆ.

**ಕೋಷ್ಟಕ 1.6.1**
**ಪರೀಕ್ಷಣಾ ವರದಿಗಳ ಸ್ಥಿತಿಗತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಸಾಲು | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನಲ್ಲಿನ ಸೇರ್ಪಡೆ | | | ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡವುಗಳು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿ ಗಳು | ಕಂಡಿಕೆ ಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆ ಗಳು | ಹಣಕಾಸಿನ ಮೌಲ್ಯ |
| 1. | 2009–10 | 393 | 656 | 120.56 | 108 | 135 | 141.19 | 4 | 30 | 0.14 | 497 | 761 | 261.61 |
| 2. | 2010–11 | 497 | 761 | 261.61 | 104 | 108 | 95.04 | 23 | 68 | 1.00 | 578 | 801 | 355.65 |
| 3. | 2011–12 | 578 | 801 | 355.65 | 143 | 285 | 7.34 | 73 | 120 | 1.06 | 648 | 966 | 361.93 |
| 4. | 2012–13 | 648 | 966 | 361.93 | 113 | 328 | 14.24 | 30 | 82 | 1.27 | 731 | 1212 | 374.90 |
| 5. | 2013–14 | 731 | 1212 | 374.90 | 132 | 350 | 43.51 | 156 | 462 | 16.63 | 707 | 1100 | 401.78 |
| 6. | 2014–15 | 707 | 1100 | 401.78 | 134 | 375 | 19.41 | 37 | 121 | 0.62 | 804 | 1354 | 420.57 |
| 7. | 2015–16 | 804 | 1354 | 420.57 | 93 | 241 | 20.77 | 55 | 292 | 13.30 | 842 | 1303 | 428.04 |
| 8. | 2016–17 | 842 | 1303 | 428.04 | 92 | 274 | 33.61 | 25 | 101 | 0.69 | 909 | 1476 | 460.96 |
| 9. | 2017–18 | 909 | 1476 | 460.96 | 58 | 189 | 21.52 | 433 | 819 | 283.43 | 534 | 846 | 199.05 |
| 10. | 2018–19 | 534 | 846 | 199.05 | 51 | 159 | 64.93 | 2 | 42 | 22.70 | 583 | 963 | 241.28 |

2018–19 ಸಾಲಿನಲ್ಲಿ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯು ಯಾವುದೇ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳನ್ನೂ ನಡೆಸಿರಲಿಲ್ಲ.

ಕಚೇರಿಗಳ ನಿಯತಕಾಲಿಕ ಪರೀಕ್ಷಣೆಗಳ ವೇಳೆಯಲ್ಲಿ, ಸ್ಥಳದಲ್ಲಿಯೇ ಅನುಪಾಲನಾ ವರದಿಯನ್ನು ಪಡೆದುಕೊಂಡನಂತರ, ಬಾಕಿ ಇರುವಂತಹ ಪರೀಕ್ಷಣಾ ವರದಿಗಳನ್ನು/ಕಂಡಿಕೆಗಳನ್ನು

[5] ವರಮಾನ ಲೆಕ್ಕ ಶೀರ್ಷಿಕೆ–0030ರ ಅಡಿಯಲ್ಲಿ.

ಸಮೀಕ್ಷಿಸಲಾಗುವುದು. ಇಲಾಖೆಗಳಿಂದ ಅನುಪಾಲನಾ ವರದಿಯು ಸ್ವೀಕೃತಗೊಂಡನಂತರವೂ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸಲಾಗುವುದು.

## 1.6.2 ಇಲಾಖೆಗಳಿಂದ ಒಪ್ಪಿಕೊಳ್ಳಲಾಗಿರುವಂತಹ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಗಳು ಒಪ್ಪಿಕೊಂಡಿದ್ದವುಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಸೂಲಾತಿ ಮಾಡಲಾಗಿರುವ ಮೊತ್ತ, ಇವುಗಳ ಸ್ಥಿತಿಗತಿಯನ್ನು **ಕಂಡಿಕೆ 1.6.2**ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ 1.6.2**

**ಇಲಾಖೆಗಳಿಂದ ಒಪ್ಪಿಕೊಳ್ಳಲಾಗಿರುವಂತಹ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿಯು ಸಂಬಂಧಿಸಿರುವ ಸಾಲು | ಸೇರಿಸಲಾಗಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳು ಒಳಗೊಂಡಿದ್ದ ಹಣಕಾಸಿನ ಮೌಲ್ಯ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳು ಒಳಗೊಂಡಿದ್ದ ಹಣಕಾಸಿನ ಮೌಲ್ಯ | 2018–19 ಸಾಲಿನಲ್ಲಿ ವಸೂಲಾತಿ ಮಾಡಲಾದ ಮೊತ್ತ | 31.3.2019 ರಲ್ಲಿದ್ದಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳಲ್ಲಿ ಮಾಡಲಾಗಿರುವ ವಸೂಲಾತಿಯ ಕ್ರೋಡೀಕೃತ ಸ್ಥಿತಿಗತಿ |
|---|---|---|---|---|---|---|---|
| 1. | 2008-09 | 6 | 325.83 | 6 | 283.04 | 0 | 0.23 |
| 2. | 2009-10 | 7 | 16.49 | 6 | 13.19 | 0 | 0.063 |
| 3. | 2010-11 | 5 | 7.39 | 5 | 7.39 | 0 | 0.07 |
| 4. | 2011-12 | 7 | 2.39 | 7 | 2.39 | 0 | 0.07 |
| 5. | 2012-13 | 8 | 44.42 | 7 | 32.39 | 0 | 0.60 |
| 6. | 2013-14 | 5 | 3.84 | 5 | 3.84 | 0 | 1.42 |
| 7. | 2014-15 | 5 | 3.72 | 5 | 3.72 | 0 | 0.38 |
| 8. | 2015-16 | 3 | 424.71 | 2 | 5.96 | 0 | 0.47 |
| 9. | 2016-17 | 3 | 20.36 | 3 | 20.17 | 0 | 0.47 |
| 10. | 2017-18 | 4 | 167.10 | 3 | 8.74 | 0 | 0.18 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2008–09ರಿಂದ 2017–18 ಸಾಲುಗಳಿಗೆ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯು ಮಾಡಿರುವ ವಸೂಲಾತಿಯು ಕೇವಲ ಶೇಕಡಾ 1.04 ಆಗಿರುತ್ತದೆ. ಆದ್ದರಿಂದ, ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಒಳಗೊಂಡಿರುವ ಬಾಕಿಗಳ ವಸೂಲಾತಿಯ ಕ್ರಮಗಳನ್ನು ಅನುಸರಿಸಲು ಇಲಾಖೆಯು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು.

## 1.7 ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ ಘಟಕಗಳನ್ನು/ಕಚೇರಿಗಳನ್ನು, ಅವುಗಳ ವರಮಾನ/ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಹಿಂದಿನ ಅವಧಿಗಳ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳಂತಹ ಸಂಸ್ಥೆಗಳೆಂಬುದಾಗಿ ವರ್ಗೀಕರಿಸಲಾಗುವುದು. ವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು, ಇನ್ನಿತರವುಗಳೊಂದಿಗೆ ಸರ್ಕಾರದ ರಾಜಸ್ವ/ವರಮಾನಗಳಲ್ಲಿನ ಪ್ರಮುಖ ಅಂಶಗಳು ಹಾಗೂ ಆಯವ್ಯಯ ಭಾಷಣ, ರಾಜ್ಯದ ಹಣಕಾಸಿನ ಮೇಲಿನ ಶ್ವೇತ ಪತ್ರ, ಹಣಕಾಸು ಆಯೋಗದ ವರದಿಗಳು (ರಾಜ್ಯ ಮತ್ತು ಕೇಂದ್ರ), ತೆರಿಗೆ ಸುಧಾರಣಾ ಸಮಿತಿಯ ಶಿಫಾರಸುಗಳು, ಕಳೆದ ಐದು ವರ್ಷಗಳಲ್ಲಿನ ರಾಜಸ್ವ/ವರಮಾನ ಗಳಿಕೆಗಳ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯತೆಗಳು, ಕಳೆದ ಐದು ವರ್ಷಗಳಲ್ಲಿ ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ಅದರ ಪ್ರಭಾವ, ಇತ್ಯಾದಿಗಳನ್ನು ಒಳಗೊಂಡಂತೆ ಸಂಭಾವ್ಯ ಅಪಾಯಗಳ ವಿಶ್ಲೇಷಣೆಯ ಆಧಾರದ ಮೇರೆಗೆ ತಯಾರಿಸಲಾಗುವುದು.

2018–19ರಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ 1,253 ಘಟಕ/ಕಚೇರಿಗಳಿದ್ದವು, ಅವುಗಳ ಪೈಕಿ 300 ಘಟಕ/ಕಚೇರಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾಯಿತು ಹಾಗೂ 303 ಘಟಕಗಳ/ಕಚೇರಿಗಳ ಅಂದರೆ ಲೆಕ್ಕಪರಿಶೋಧನೆ ಮಾಡಬೇಕಾದ ಒಟ್ಟು ಘಟಕಗಳ/ಕಚೇರಿಗಳ ಶೇಕಡಾ 24ರಷ್ಟು ಘಟಕಗಳು/ಕಚೇರಿಗಳ ಲೆಕ್ಕಪರಿಶೋಧನೆಯನ್ನು ಮಾಡಲಾಯಿತು ವಿವರಗಳನ್ನು **ಕೋಷ್ಟಕ 1.7.1** ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳ ವಿವರಗಳು**

| ಕ್ರಮ ಸಂಖ್ಯೆ | ಇಲಾಖೆ | ಘಟಕ/ಕಚೇರಿಗಳ ಸಂಖ್ಯೆ | | |
|---|---|---|---|---|
| | | 2018–19 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಿದ್ದ ಘಟಕ/ಕಚೇರಿಗಳು | 2018–19ರಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆ ಮಾಡಲಾದ ಘಟಕ/ಕಚೇರಿಗಳು | 2018–19ರಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳು |
| 1. | ವಾಣಿಜ್ಯ ತೆರಿಗೆಗಳು | 430 | 102 | 102 |
| 2. | ಮುದ್ರಾಂಕ ಮತ್ತು ನೋಂದಣಿ | 282 | 49 | 51 |
| 3. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 82 | 30 | 31 |
| 4. | ಭೂ ಕಂದಾಯ | 258 | 38 | 38 |
| 5. | ರಾಜ್ಯ ಅಬಕಾರಿ | 129 | 56 | 56 |
| 6. | ಖನಿಜಗಳಿಂದ ಸ್ವೀಕೃತಿಗಳು | 34 | 19 | 19 |
| 7. | ಇಂಧನ | 38 | 6 | 6 |
| | **ಒಟ್ಟು** | **1,253** | **300** | **303** |

ಮೇಲೆ ತಿಳಿಸಲಾದಂತಹ ಕಚೇರಿಗಳು/ಘಟಕಗಳ ಲೆಕ್ಕಪರಿಶೋಧನೆಯಲ್ಲದೆಯೇ "ಕರ್ನಾಟಕದಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಮಧ್ಯಂತರ ಅನುವುಗಳು" ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಅನುಪಾಲನಾ ಲೆಕ್ಕಪರಿಶೋಧನೆಯನ್ನೂ ಸಹ ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಯಿತು.

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

**ಪ್ರಸಕ್ತ ಸಾಲಿನಲ್ಲಿ ನಡೆಸಲಾದಂತಹ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆಗಳು, ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಮತ್ತು ಇತರೆ ಇಲಾಖಾ ಕಚೇರಿಗಳ 303 ಘಟಕ/ಕಚೇರಿಗಳ ದಾಖಲೆಗಳ 2018–19 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ ಪರಿಶೀಲನೆಯು 763 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 1502.73 ಕೋಟಿ ಮೊತ್ತದಷ್ಟು ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇತ್ಯಾದಿಗಳನ್ನು ತೋರಿಸಿಕೊಟ್ಟಿತು. ಪ್ರಸಕ್ತ ಸಾಲಿನಲ್ಲಿ, ಸಂಬಂಧಪಟ್ಟ ಇಲಾಖೆಗಳು 2018–19 ಸಾಲಿನಲ್ಲಿ 43 ಕಂಡಿಕೆಗಳ ಮೂಲಕ ₹ 985.83 ಕೋಟಿ ಮೊತ್ತವು ಒಳಗೊಂಡಂತೆ ಸ್ಪಷ್ಟಪಡಿಸಲಾಗಿದ್ದಂತಹ ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿದ್ದವು. ಈ ಹಿಂದಿನ ಸಾಲುಗಳ ಲೆಕ್ಕಪರಿಶೋಧನೆಯ ಅಂಶಗಳಿಗೆ ಸಂಬಂಧಿಸಿದಂತೆ 2018–19ರಲ್ಲಿ 535 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ₹ 30.62 ಕೋಟಿ ಮೊತ್ತವನ್ನು ಇಲಾಖೆಗಳು ವಸೂಲಾತಿ ಮಾಡಿದವು.

## 1.9 ಈ ವರದಿಯ ವ್ಯಾಪ್ತಿ

ಈ ವರದಿಯ ಭಾಗ–II ರಲ್ಲಿ, ಮೇಲೆ ಉಲ್ಲೇಖಿಸಲ್ಪಟ್ಟಿರುವಂತೆ ₹ 1,092.70 ಕೋಟಿ ಮೊತ್ತವು ಒಳಗೊಂಡಂತೆ ಒಂದು ಅನುಪಾಲನಾ ಲೆಕ್ಕಪರಿಶೋಧನೆಯೂ ಸೇರಿದಂತೆ ಪ್ರಸ್ತಕ್ತ ಸಾಲಿನ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಹಾಗೂ ಹಿಂದಿನ ಸಾಲುಗಳಲ್ಲಿ ಗಮನಿಸಲಾದಂತಹ (ಈ ಹಿಂದಿನ

ವರದಿಗಳಲ್ಲಿ ಸೇರಿಸಲು ಸಾಧ್ಯವಾಗದಿದ್ದಂತಹ) ಲೆಕ್ಕಪರಿಶೋಧನಾ ಅಂಶಗಳಿಂದ ಆಯ್ಕೆ ಮಾಡಲಾಗಿರುವಂತಹ 17 ಕಂಡಿಕೆಗಳನ್ನು ಒಳಗೊಂಡಿರುತ್ತದೆ.

ಇಲಾಖೆಗಳು/ಸರ್ಕಾರವು ₹ 1,015.81 ಕೋಟಿ ಮೊತ್ತವು ಒಳಗೊಂಡಂತೆ 15 ಕಂಡಿಕೆಗಳಿಗೆ ಸಂಬಂಧಿಸಿದಂತೆ 2,701 ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ 88 ಪ್ರಕರಣಗಳಲ್ಲಿ ₹ 5.34 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಸೆಪ್ಟಂಬರ್ 2020). ಇವುಗಳ ಬಗ್ಗೆ ಮುಂದಿನ II ರಿಂದ IVರವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.